ಮಾದು, 'ಎಲ್ಲಾ ಮಕ್ಕಳು ಒಟ್ಟಿಗೆ ಒಂದೇ ಶಾಲೆಗೆ ಹೋಗಲಿ, ಅದೇ ಶಾಲೆಯಲ್ಲಿ ಅವನ ಅಕ್ಕಂದಿರೆಲ್ಲಾ ಚೆನ್ನಾಗಿಯೇ ಓದ್ತಾ ಇದ್ದಾರಲ್ಲ, ಅವನೊಬ್ಬನನ್ನೆ ಏಕೆ ಬೇರೆ ಶಾಲೆಗೆ ಸೇರಿಸಬೇಕು. ಸೇರಿಸಿದ್ರೆ ಎಲ್ಲರನ್ನು ಸೇರಿಸೋಣ' ಅಂತ ಹೇಳಿದ್ದರಿಂದ, ವಾರಿಜ ತನ್ನಾಸೆಯನ್ನು ಹತ್ತಿಕ್ಕಿಕೊಳ್ಳಬೇಕಾಯಿತು. ವೀರೇಶನೂ ಬೇರೆ ಶಾಲೆಗೆ ಹೋಗಲು ಒಪ್ಪದ ಕಾರಣ ವಾರಿಜ ಸುಮ್ಮನಾಗಿದ್ದಳು. ವೀರೇಶನಿಗೆ ಅಕ್ಕಂದಿರ ಜೊತೆ ಇರುವುದೇ ಹೆಚ್ಚು ಖುಷಿ. ಶಾಲೆಯಲ್ಲಿಯೂ ಅಷ್ಟೇ, ಬೆಲ್ಲಾಗುವ ತನಕ ಅಕ್ಕಂದಿರ ಜೊತೆಯೇ, ತರಗತಿ ನಡೆಯುವಾಗ ಮಾತ್ರ ತನ್ನ ಕ್ಲಾಸಿನಲ್ಲಿ ಕೂರುತ್ತಿದ್ದ. ಊಟಕ್ಕೆ ಬೆಲ್ ಆದ ಕೂಡಲೇ ಅಕ್ಕಂದಿರನ್ನು ಹುಡುಕಿಕೊಂಡು ಓಡಿ ಬಂದುಬಿಡುತ್ತಿದ್ದ. ಅಕ್ಕಂದಿರ ಜೊತೆನೆ ಊಟ, ಅವ್ರ ಜೊತೆನೇ ಆಟ, ಒಟ್ಟಿನಲ್ಲಿ ಅಕ್ಕಂದಿರನ್ನು ಬಿಟ್ಟು ಇರುತ್ತಿರಲಿಲ್ಲ. ಎಲ್ಲಾ ಹುಡುಗರಂತೆ ಅವನು ಗಂಡುಮಕ್ಕಳ ಜೊತೆ ಸೇರದೆ ಅಕ್ಕಂದಿರ ಜೊತೆ ಅವರು ಆಡುವ ಕುಂಟಾಬಿಲ್ಲೆ, ಅಡುಗೆಯಾಟ, ಬೊಂಬೆಯಾಟ, ಮನೆಯಾಟ ಇವುಗಳನ್ನೇ ಆಡಿಕೊಂಡು ಇದ್ದುಬಿಡುತ್ತಿದ್ದ. ದಿನಗಳು ಕಳೆದಂತೆ ಮಕ್ಕಳು ಮುಂದಿನ ತರಗತಿಗೆ ಹೋಗುತ್ತಿದ್ದರು. ಈಗ ವೀರೇಶ ಏಳನೇ ತರಗತಿ. ಅಕ್ಕಂದಿರೆಲ್ಲ ಇಬ್ಬರು ಕಾಲೇಜು, ಉಳಿದವರು ಹೈಸ್ಕೂಲ್. ಅಕ್ಕಂದಿರ ಜೊತೆ ಇಲ್ಲದಿದ್ದರೂ ಅವನು ಹೆಣ್ಣುಮಕ್ಕಳ ಜೊತೇನೆ ಇರ್ತಾ ಇದ್ದ. ಅವರಿಗೂ ವೀರೇಶ ಹುಡುಗ ಅನ್ನೋ ಯಾವ ಭಾವನೆಯೂ ಕಾಡದೆ ತಮ್ಮ ಜೊತೆ ಸೇರಿಸಿಕೊಂಡು ಬಿಟ್ಟಿದ್ದರು. ಮನೆಗೆ ಬಂದ ಮೇಲೂ ಅಷ್ಟೇ, ಅಕ್ಕಂದಿರ ಜೊತೆಯೇ ಆಡಿಕೊಳ್ಳುತ್ತಿದ್ದ.

ವಾರಿಜ 'ಅದೇನೊ ಹೆಣ್ಣುಹುಡುಗಿಯರ ಜೊತೇನೆ ಯಾವಾಗಲೂ ಇರ್ತೀಯಾ. ಅವರ ಜೊತೇನೆ ಅದೇನು ಸದಾ ಆಡ್ತಾ ಇರ್ತೀಯಾ, ಹೋಗೊ ಹುಡುಗರ ಜೊತೆ ಆಟ ಆಡು' ಅಂತ ಬೈದು ಕಳಿಸಿದಾಗ, ಅಲ್ಲಿಂದ ಅಮ್ಮನ ಬಲವಂತಕ್ಕೆ ಎದ್ದುಹೋಗುತ್ತಿದ್ದ. ಹುಡುಗರ ಜೊತೆ ಆಡಲು ಅವನಿಗೆ ಒಂದಿಷ್ಟೂ ಮನಸ್ಸಿರುತ್ತಿರಲಿಲ್ಲ. ಅವರು ಆಡುವ ಮರಕೋತಿ ಆಟ, ಕ್ರಿಕೆಟ್ ಆಟ, ಕಬಡ್ಡಿ – ಈ ಆಟಗಳು ಅವನಿಗೆ ಇಷ್ಟವಾಗುತ್ತಿರಲಿಲ್ಲ. ಅವರು ಆಡುವುದನ್ನು ಸುಮ್ಮನೆ ಒಂದು ಕಡೆ ಕುಳಿತು ನೋಡುತ್ತಿದ್ದ. 'ಬಾರೋ ಆಟಕ್ಕೆ' ಅಂತ ಅವರು ಕರೆದರೂ ಹೋಗುತ್ತಿರಲಿಲ್ಲ. ಸ್ವಲ್ಪ ಹೊತ್ತು ಅಲ್ಲಿದ್ದು ಬೇಸರ ಆಗಿ ಮತ್ತೆ ಅಕ್ಕಂದಿರನ್ನು ಸೇರಿಕೊಂಡು ಬಿಡುತ್ತಿದ್ದ. ವಾರಿಜ ಸದಾ ಮಗನನ್ನು ಕಾಯುತ್ತಾ ಕುಳಿತುಕೊಳ್ಳಲು ಸಾಧ್ಯವೇ?

ವಾರಿಜ ನಿಜವಾಗಿಯೂ ತಳಮಳಗೊಂಡಿದ್ದಳು. ಯಾವುದೋ ಅಸ್ಪಷ್ಟ ಕಲ್ಪನೆಯಲ್ಲಿ ನಡುಗಿದ್ದಳು. ಏನೇ ಸಮಾಧಾನ ತಂದುಕೊಂಡರೂ ಮನದೊಳಗಿನ ಆತಂಕ ಕಡಿಮೆಯಾಗುತ್ತಲೇ ಇಲ್ಲ. ಯಾರೊಂದಿಗೂ ಹೇಳಿಕೊಳ್ಳುವಂತಿಲ್ಲ, ಹೇಳಿದರೂ ಕೇಳಿಯಾರೇ, ಅಪಹಾಸ್ಯ ಮಾಡಿ ನಕ್ಕಾರು. ಯಾರಿಗೂ ಹೇಳುವುದು ಬೇಡ, ಅದು ನನ್ನೊಳಗೆ ಇದ್ದು ಬಿಡಲಿ. ನನ್ನ ಭಯ ಸುಳ್ಳಾಗಲಿ ಅಂತ ತನ್ನನ್ನು ತಾನು ಸಂತೈಸಿಕೊಂಡಳು.

ಶಾಲೆಯಲ್ಲಿ ವಾರ್ಷಿಕೋತ್ಸವ ಸಮಾರಂಭ ನಿಗದಿಯಾಯಿತು. ವಾರ್ಷಿಕೋತ್ಸವಕ್ಕೆಂದು ನಾಟಕವಾಡಿಸಲು ಹೊರಟಾಗ ವೀರೇಶನೂ ಕುಣಿಯುತ್ತಾ ಸೇರಿಕೊಂಡಿದ್ದ. 'ಶ್ರೀಕೃಷ್ಣ ಪಾರಿಜಾತ' ನಾಟಕ ಆಯ್ಕೆ ಮಾಡಿಕೊಂಡಿದ್ದರು. ಸ್ವಲ್ಪ ಕಪ್ಪಿದ್ದ ಮೇಣಕಾಗೆ ಕೃಷ್ಣನ ಪಾತ್ರ ಕೊಟ್ಟಿದ್ದರೆ, ಅದೇ ತರಗತಿಯ ಹುಡುಗಿ ರುಕ್ಮಿಣಿ ಪಾತ್ರ ಮಾಡಲು ಒಪ್ಪಿದ್ದಳು. ಬೆಳ್ಳಗೆ ಮುದ್ದು ಮುದ್ದಾಗಿದ್ದ ವೀರೇಶನಿಗೆ ಸತ್ಯಭಾಮೆ ಪಾತ್ರ ಕೊಟ್ಟಿದ್ದರು. ಸತ್ಯಭಾಮೆಯ ಪಾತ್ರವನ್ನು ವೀರೇಶ ಬಹಳ ಚೆನ್ನಾಗಿ ಅಭಿನಯಿಸುತ್ತಿದ್ದ. ಸತ್ಯಭಾಮೆಯ ಹಾವಭಾವ, ವಯ್ಯಾರ, ಕೋಪ, ಸೆಡವು ಎಲ್ಲವನ್ನೂ ವೀರೇಶ ಸಹಜವಾಗಿ ಮಾಡುತ್ತಿದ್ದ. ಮನೆಯಲ್ಲಿ ಮಾತ್ರ ತನ್ನ ನಾಟಕದ ಬಗ್ಗೆ ಯಾರಿಗೂ ಹೇಳಿರಲೇ ಇಲ್ಲ. ಅದನ್ನು ಕೇಳೊ ಪುರುಸೊತ್ತಾದರೂ ಮನೆಯವರಿಗೆ ಎಲ್ಲಿತ್ತು? ಆದರೆ ಆ ನಾಟಕಕ್ಕಾಗಿ ಅವನು ಸೀರೆ ಉಡಬೇಕಿತ್ತು. ಅಮ್ಮನನ್ನೋ ದೊಡ್ಡಮ್ಮನನ್ನೋ ಕೇಳಬೇಕು. ಹೇಗಪ್ಪ ಕೇಳುವುದು ಅನ್ನೋ ಚಿಂತೆ ವೀರೇಶನಿಗೆ. ಅಮ್ಮನನ್ನು ಕೇಳಲು ಭಯ. ನಾನೇನಾದರೂ ನಾಟಕಕ್ಕಾಗಿ ಸೀರೆ ಬೇಕು ಅಂದರೆ ಅಮ್ಮಾ ಕೊಂದೇ ಬಿಡುತ್ತಾಳೆ. ಅವಳಿಗೆ ತಾನು ನಾಟಕದಲ್ಲಿ ಪಾತ್ರ ಮಾಡುತ್ತಿರುವುದು ಗೊತ್ತಾಗುವುದು ಬೇಡವಾಗಿತ್ತು. ಅಕ್ಕಂದಿರಲ್ಲೂ ಹಾಗೆಯೇ ಬೇಡಿಕೊಂಡಿದ್ದ. ಅವರಿಗೂ ಗೊತ್ತಿತ್ತು ವಾರಿಜಾಳ ಕೋಪ. ತಮ್ಮ ಬಟ್ಟೆ ಹಾಕಿಕೊಂಡರೇನೆ ಅಷ್ಟೊಂದು ಕೋಪಗೊಳ್ಳುವ ವಾರಿಜ, ಈಗ ವೀರೇಶ ನಾಟಕದಲ್ಲಿ ಸೀರೆ ಉಡುತ್ತಾನೆ ಅಂದರೆ ಸುಮ್ಮನೇ ಬಿಡುವಳೇ?

ವೀರೇಶ ನಾಟಕದಲ್ಲಿ ಸತ್ಯಭಾಮೆಯ ಪಾತ್ರ ಮಾಡಲು ಒಪ್ಪಬಾರದಿತ್ತು. ಈ ವೀರೇಶನಿಗೆ ಇದೆಲ್ಲಾ ಏಕೆ ಬೇಕಿತ್ತು ಅಂತ ಅಂದುಕೊಂಡರೂ ಪ್ರೀತಿಯ ತಮ್ಮ ನಾಟಕವನ್ನು ಅಷ್ಟೊಂದು ಚೆನ್ನಾಗಿ ಮಾಡುತ್ತಿದ್ದುದನ್ನು ಕಂಡು ಅವರಿಗೂ ಖುಷಿಯಾಗಿತ್ತು. ಆದರೆ ಪಾತ್ರಕ್ಕಾಗಿ ಸೀರೆ ಹೊಂದಿಸುವುದು ಹೇಗೆಂಬ ಚಿಂತೆಯಲ್ಲಿ ವೀರೇಶನೊಂದಿಗೆ ಸೇರಿಕೊಂಡು ಉಪಾಯ ಮಾಡುತ್ತಿರುವಾಗಲೇ, ನಾಟಕಕ್ಕಾಗಿ ವೇಷಭೂಷಣಗಳನ್ನು ಹೊರಗಿನಿಂದಲೇ ಸ್ಕೂಲಿನವರು ತರಿಸುತ್ತೇವೆಂದು ಹೇಳಿದಾಗ ನೆಮ್ಮದಿಯಿಂದ ಉಸಿರುಬಿಟ್ಟಿದ್ದರು. ಹಾಗಾಗಿ ವೀರೇಶ ಮನೆಯಲ್ಲಿ ತನ್ನ ನಾಟಕದ ಪಾತ್ರಕ್ಕಾಗಿ ಏನನ್ನೂ ಕೇಳುವ ಪ್ರಸಂಗ ಬರಲೇ ಇಲ್ಲ. ಮನೆಯಲ್ಲಿ ಯಾರೂ ನಾಟಕದ ಬಗ್ಗೆ ಹೇಳಲೇ ಇಲ್ಲ. ವಾರ್ಷಿಕೋತ್ಸವದ ದಿನ ಮಕ್ಕಳು ಬೇಗನೆ ಮನೆಯನ್ನು ಬಿಟ್ಟು ಶಾಲೆಯ ಹತ್ತಿರ ಬಂದಿದ್ದರು. ಮೇಣಕ ಮಾತ್ರ ನಾಟಕದಲ್ಲಿ ಪಾತ್ರ ಮಾಡುತ್ತಿದ್ದಾಳೆ ಅಂತ ಮಾತ್ರ ಮನೆಯಲ್ಲಿ ಗೊತ್ತಿತ್ತು. ಕಾರ್ಯಕ್ರಮ ಶುರುವಾಗುವ ಹೊತ್ತಿಗೆ ಹೋದರಾಯಿತೆಂದು ಹಿರಿಯರು ಹೇಳಿದ್ದರಿಂದ ಸಮಾಧಾನವಾಗಿ ಮಕ್ಕಳು ಹೊರಟಿದ್ದರು. ವೀರೇಶ ಪಾತ್ರ ಮಾಡುತ್ತಿರುವುದು ಆಮೇಲೆ ಮನೆಯವರಿಗೆ ಗೊತ್ತಾದರೂ ಪರವಾಗಿಲ್ಲ, ಮುಂಚೆ ಗೊತ್ತಾಗುವುದು ಬೇಡ ಅನ್ನುವುದು ಮಕ್ಕಳ ಅಭಿಪ್ರಾಯವಾದರೂ ಆತಂಕ ಮಾತ್ರ ಕಾಡುತ್ತಿತ್ತು.

ಮೇಕಪ್ ಹಾಕಿಸಿಕೊಂಡ ವೀರೇಶ ಮುದ್ದಾಗಿ ಕಾಣುತ್ತಿದ್ದ. ಕಾರ್ಯಕ್ರಮ ಆರಂಭವಾಯಿತು. ನಾಟಕ ಶುರುವಾಗುವ ಹೊತ್ತಿಗೆ ಕತ್ತಲೆ ಆಗಿಯೇ ಬಿಟ್ಟಿತ್ತು. ಮೊದಲನೆಯ ದೃಶ್ಯವೇ ಕೃಷ್ಣ ಸತ್ಯಭಾಮೆಯರದ್ದು. ಮೇಣಕ ಮತ್ತು ವೀರೇಶ ತುಂಬಾ ಚೆನ್ನಾಗಿ ಅಭಿನಯಿಸುತ್ತಿದ್ದರು. ವೀರೇಶ ಅಂತೂ ಸಾಕ್ಷಾತ್ ಸತ್ಯಭಾಮೆಯಂತೆಯೇ ಕಾಣಿಸುತ್ತಿದ್ದ. ಅವನ ಅಭಿನಯಕ್ಕೆ ಕೇಕೆ, ಶಿಳ್ಳೆಗಳು ಬೀಳುತ್ತಿದ್ದವು. ಜಗದೀಶ, ಶಾಂಭವಿ, ಮಾದೇವ, ವಾರಿಜ ಕೂಡಾ ಆ ನಾಟಕವನ್ನು ನೋಡುತ್ತಾ ಖುಷಿಪಡುತ್ತಿದ್ದರು. ಮೇಣಕ ಅದೆಷ್ಟು ಚೆನ್ನಾಗಿ ಮಾಡ್ತಾ ಇದ್ದಾಳೆ, ಥೇಟ್ ಕೃಷ್ಣನ ಥರಾನೇ ಕಾಣ್ತಾ ಇದ್ದಾಳೆ, ಸತ್ಯಭಾಮೆ ಮಾಡಿರೋ ಹುಡುಗಿನೂ ಚೆನ್ನಾಗಿ ಮಾಡ್ತಾ ಇದ್ದಾಳೆ ಅಂತ ಮಾತಾಡಿಕೊಳ್ಳುವಾಗ ಪಕ್ಕದಲ್ಲಿದ್ದವರು, 'ಸತ್ಯಭಾಮೆ ಮಾಡ್ತಾ ಇರೋದು ಹುಡ್ಗಿ ಅಲ್ಲ, ಅದು ಹುಡುಗ' ಅಂದಾಗ 'ಹೌದಾ' ಅಂತ ಅಚ್ಚರಿ ಪಟ್ಟರು. ವಾರಿಜನೂ, 'ಹುಡುಗ ಆದ್ರೂ ಅದೆಷ್ಟು ಚೆನ್ನಾಗಿ ಮಾಡ್ತಾ ಇದೆ ಅಲ್ವಾ ಅಕ್ಕ' ಅಂತ ಶಾಂಭವಿಗೆ ಹೇಳ್ತಾ ನಾಟಕದಲ್ಲಿ ತಲ್ಲೀನಳಾದಳು.

(ಸಶೇಷ)

## ಪ್ರತಿಕ್ರಿಯೆ




### ಕಾದಂಬರಿ ಹಿಡಿದಿಟ್ಟಿತು!

ಹನ್ನೆರಡು ವಾರಗಳ ಕಾಲ ನಮ್ಮನ್ನು ಹಿಡಿದಿಟ್ಟ ಮೋಹನ್ ಪ್ರಸಾದ್ ಅವರ ಕಾದಂಬರಿ ಚೆನ್ನಾಗಿದೆ. ಅಮ್ಮು ಅನ್ಯಾಯದ ವಿರುದ್ಧ ಹೋರಾಡಲು ಹೋಗಿ ತನ್ನ ಜೀವವನ್ನೇ ಬಲಿ ಕೊಡಬೇಕಾಯಿತು. ಕೊನೆಯ ಕಂತಿನವರೆಗೂ ಕೊಲೆಗಾರ ಯಾರು ಎಂಬ ಸುಳಿವು ಕೊಡದೇ ಓದಿಸಿಕೊಂಡು ಬಂದ ರೀತಿ ತುಂಬಾ ಹಿಡಿಸಿತು.

—ಪಿ.ಎಚ್. ಪಾಟೀಲ್, ರಾಣೆಬೆನ್ನೂರ

### ಸಿನಿಮಾ ನೋಡಿದಂತಾಯಿತು

ಕ್ರಿಮಿನಲ್ ಪ್ರಕರಣದಲ್ಲಿ ಪೊಲೀಸ್ ಇಲಾಖೆ ಸೂಕ್ಷ್ಮತೆ ಹಾಗೂ ಬದ್ಧತೆಯಿಂದ ವಿವಿಧ ಆಯಾಮಗಳಲ್ಲಿ ತನಿಖೆ ನಡೆಸುವುದರ ಮೂಲಕ ನೈಜ ಅಪರಾಧಿಯನ್ನು ಪತ್ತೆ ಮಾಡುವ ವಿಧಾನ ಮನಮುಟ್ಟುವಂತೆ ನಿರೂಪಿಸಿತವಾಗಿದೆ. ಕೊನೆಯ ಕಂತು ಓದುವಾಗಲಂತೂ ಪತ್ತೇದಾರಿ ಸಿನಿಮಾ ನೋಡಿದಂತಾಯಿತು.

—ಪಿ.ಎ. ಸುಧೀಂದ್ರ, ಬೆಂಗಳೂರು